

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ತಳಬುಡ ಅರ್ಥವಾಗದ ಕಾನೂನಿನ ತಲೆಬುರುಡೆ

ಯಾವುದೇ ದೇಶದ ಕಾನೂನುಗಳನ್ನು ಆ ದೇಶದ ಆಡಳಿತದ ಸುಗಮತೆಯ ದೃಷ್ಟಿಯಿಂದ ಮತ್ತು ಆ ದೇಶದ ನಾಗರೀಕರ ಹಿತದೃಷ್ಟಿಯಿಂದ ಮಾಡಲಾಗಿರುತ್ತದೆ. ಈ ಕಾನೂನುಗಳಲ್ಲಿ ಕೆಲವು ಸಿವಿಲ್ ಸ್ವರೂಪದ ಕಾನೂನುಗಳಾದರೆ ಮತ್ತೆ ಕೆಲವು ಕ್ರಿಮಿನಲ್ ಸ್ವರೂಪದ ಕಾನೂನುಗಳು. ನಮ್ಮ ದೇಶದಲ್ಲಿ ಅವುಗಳನ್ನು ಕಾರ್ಯರೂಪಕ್ಕೆ ತರುವ ವಿಧಾನವನ್ನು ಅನುಕ್ರಮವಾಗಿ ಸಿವಿಲ್ ಪ್ರೊಸೀಜರ್ ಕೋಡ್ (C.P.C) ಮತ್ತು ಕ್ರಿಮಿನಲ್ ಪ್ರೊಸೀಜರ್ ಕೋಡ್ (Cr.P.C) ಎಂದು ಕರೆಯುತ್ತಾರೆ. ಕಾನೂನಿನ ಕೈಗಳು ಬಹಳ ಉದ್ದ, ಅವು ಯಾರನ್ನೂ ಬಿಡುವುದಿಲ್ಲ, ವ್ಯಕ್ತಿ ಎಷ್ಟೇ ದೊಡ್ಡವನಿರಲಿ ಅವನು ಕಾನೂನಿಗೆ ಅತೀತನಲ್ಲ ಎಂದು ಕಾನೂನು ಪಂಡಿತರು ಹೇಳುತ್ತಾರೆ. ಇದು ದೇಶದ ಇತ್ತೀಚಿನ ರಾಜಕೀಯ ವಿದ್ಯಮಾನಗಳ ಹಿನ್ನೆಲೆಯಲ್ಲಿ ನಿಜವೆಂದು ಕಂಡುಬಂದರೂ 'ಕಾನೂನು ಒಂದು ಕತ್ತೆ' (Law is an ass) ಎಂಬ ಮೂದಲಿಕೆಯ ಮಾತೂ ಕೇಳಿಬರುತ್ತದೆ. ಅಂದರೆ ಕಾನೂನು ಎಂಬ ಕತ್ತೆ ಯಾರನ್ನಾದರೂ ಒದೆಯುತ್ತದೆ, ಅದಕ್ಕೆ ಬುದ್ಧಿ ಇಲ್ಲ ಎಂದರ್ಥ. ಅದನ್ನು ಕತ್ತೆಯನ್ನಾಗಿ ಮಾಡಿಕೊಂಡು ಒದೆಸುವ ಜಾಣರೂ ಇದ್ದಾರೆ. ಸಾಮಾನ್ಯ ತಿಳುವಳಿಕೆಗೆ (common sense) ವಿರುದ್ಧವಾದ ರೀತಿಯಲ್ಲಿ ಕಾನೂನು ರೂಪುಗೊಂಡಿದ್ದರೆ ಅಂತಹ ಸಂದರ್ಭಗಳಲ್ಲಿ ಹೀಗೆ ವಿಡಂಬನೆ ಮಾಡಲಾಗುತ್ತದೆ. ಪಾನಮತ್ತರಾಗಿ ವಾಹನ ಓಡಿಸುವುದು ದಂಡನಾರ್ಹ ಅಪರಾಧ. ಕುಡಿದು ಕಾರು ಓಡಿಸಿದರೆ ದಂಡಿಸುವುದು ಸರಿ, ಕುಡಿದು ಒಂಟೆ ಓಡಿಸಿದರೆ ಒಂಟೆಸವಾರನನ್ನು ದಂಡಿಸಬಹುದೇ? ಯಾವ ಕಾನೂನಿನ ಅಡಿಯಲ್ಲಿ ಶಿಕ್ಷೆ ನೀಡಬೇಕು? ಮಿತಿಮೀರಿ ಕುಡಿದಿದ್ದನೆಂಬ ಅಪರಾಧಕ್ಕೋ, ಕುಡಿದು ವಾಹನ ನಡೆಸುತ್ತಿದ್ದನೆಂಬ ಅಪರಾಧಕ್ಕೋ? ವಾಹನದ (Vehicle) ಪರಿಭಾಷೆಯಲ್ಲಿ 'ಒಂಟೆ' ಬರುತ್ತದೆಯೇ? ಈ ವಿಚಾರವಾಗಿ ಇತ್ತೀಚೆಗೆ ಆಸ್ಟ್ರೇಲಿಯಾದ ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಅಲ್ಲಿಯ ನಾಗರಿಕರ ಹುಬ್ಬುಗಂಟಿಕ್ಕಿಸಿದೆ. ಶಿವನ ವಾಹನ ನಂದಿ, ವಿಷ್ಣುವಿನ ವಾಹನ ಗರುಡ, ಗಣಪತಿಯ ವಾಹನ ಮೂಷಿಕ, ಷಣ್ಮುಖನ ವಾಹನ ನವಿಲು ಎಂದು ನಂಬಿದ ಭಾರತೀಯರಿಗೆ ಒಂಟೆಯೇ ಏಕೆ ಈ ಭೂಮಿಯ ಮೇಲಿರುವ ಎಲ್ಲ ಪ್ರಾಣಿಗಳೂ ಒಂದಲ್ಲ ಒಂದು ದೇವರ ವಾಹನವೆಂದು ಭಾರತದ ಕಾನೂನು ಪಂಡಿತರು ವಾದ ಮಂಡಿಸಿದರೆ ನ್ಯಾಯಾಧೀಶರು ಒಪ್ಪದಿರಲು ಸಾಧ್ಯವೇ!

ಪ್ರತಿಯೊಂದು ಸಿಗರೇಟ್ ಪ್ಯಾಕ್ ಮೇಲೆಯೂ "Smoking is injurious to health" ಎಂಬ ಎಚ್ಚರಿಕೆಯ ಮಾತನ್ನು ಮುದ್ರಿಸಬೇಕೆಂಬ ನಿಯಮವಿದೆ. ಅಪಾಯದ ಸೂಚಕವಾಗಿ ಎರಡು ಅಡ್ಡಲಾದ ಮೂಳೆಗಳ ಮೇಲಿರುವ ಮನುಷ್ಯನ ತಲೆಬುರುಡೆಯ ಚಿತ್ರವೂ ಮುದ್ರಿತವಾಗಿರುತ್ತದೆ. ಇದು ಯಾರ ತಲೆಬುರುಡೆ? ಧೂಮವ್ಯಸನಿಯದೋ, ವೈದ್ಯನದೋ, ಕಾನೂನುಪಂಡಿತನದೋ, ಕಾನೂನು ಮಾಡಿದ ಶಾಸಕನದೋ? ಈ ರೀತಿ ಮುದ್ರಿಸದ ಸಿಗರೇಟ್ ಕಂಪನಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬಹುದು. ಹಾಗೆ ಇಂಗ್ಲೀಷಿನಲ್ಲಿ ಮುದ್ರಿಸಿದರೂ "ಧೂಮಪಾನ ಆರೋಗ್ಯಕ್ಕೆ ಹಾನಿಕರ" ಎಂದು ಕನ್ನಡದಲ್ಲಿ ಮುದ್ರಿಸದಿರುವುದರಿಂದ ಇಂಗ್ಲೀಷ್ ಅರ್ಥವಾಗದ 'ಖನ್ನಡ ಉಟ್ಟು ಓರಾಟಗಾರರು' ಕಂಪನಿಯ ವಿರುದ್ಧ ಕಾನೂನು ಕ್ರಮ ಜರುಗಿಸಬಹುದೇ? ಆದರೆ ಅದರಿಂದ ಆಗುವ ಪ್ರಯೋಜನವಾದರೂ ಏನು? ಮೊದಲನೆಯದಾಗಿ ಯಾರು ಅದನ್ನು ಓದುತ್ತಾರೆ? ಎಷ್ಟು ಜನ ಈ ಎಚ್ಚರಿಕೆಯ ಮಾತನ್ನು ಓದಿ ಸಿಗರೇಟ್ ಸೇದುವುದನ್ನು ಬಿಟ್ಟಿದ್ದಾರೆ? ಹೀಗೆ ಮುದ್ರಿಸುವುದರಿಂದ ಧೂಮಪಾನ ಮಾಡುವವರ ಸಂಖ್ಯೆಯೇನೂ ಕಡಿಮೆಯಾಗುವುದಿಲ್ಲವೆಂಬ ಸಂಗತಿ ಒಬ್ಬ ಹಳಿಯ ಹೈದನಿಗೂ ಗೊತ್ತು. ಆದಕಾರಣವೇ ಸಿಗರೇಟ್ ಕಂಪನಿಗಳು ಧಾರಾಳವಾಗಿ ಮುದ್ರಿಸುತ್ತವೆ. ಅಷ್ಟೇ ಧಾರಾಳವಾಗಿ ಕ್ಯಾನ್ಸರ್ ರೋಗಕ್ಕೂ ಕಾರಣವಾಗುತ್ತವೆ. ಇಲ್ಲಿ ದಂಡಿಸಬೇಕಾದ್ದು ಸಿಗರೇಟ್ ಕಂಪನಿಗಳನ್ನೋ, ಆ ಕಂಪನಿಗಳಿಗೆ ಲೈಸೆನ್ಸ್ ಕೊಟ್ಟ ಸರಕಾರವನ್ನೋ ಎಂಬುದನ್ನು ವಿಚಾರವಂತರು ಚಿಂತಿಸುವುದೊಳಿತು. ಸರಕಾರವೇನೂ ಮಠವಲ್ಲ, ಮಂತ್ರಿಗಳೇನೂ ಮಠಾಧೀಶರಲ್ಲ ಎಂಬ ಉತ್ತರ ಬಂದರೆ ಆಶ್ಚರ್ಯಪಡಬೇಕಾಗಿಲ್ಲ.

'ಮದ್ಯಪಾನ ಸಂಯಮ ಮಂಡಳಿ' ಎಂಬ ರಾಜ್ಯ ಸರ್ಕಾರದ ಕೃಪಾಪೋಷಿತ ಮಂಡಳಿಯೊಂದು ಇದೆ. ಇದರ ಕೆಲಸವೇನು, ಗುರಿ ಏನು? ಮದ್ಯಪಾನ ನಿಷೇಧವಂತೂ ಅಲ್ಲ. ಸಂಯಮದಿಂದ ಮಿತವಾಗಿ ಕುಡಿಯಿರಿ, ಗಟಾರಕ್ಕೆ ಬೀಳುವಷ್ಟು ಕುಡಿಯಬೇಡಿರಿ ಎಂದು ಹೇಳುವುದು. ಕಳೆದ ಜನವರಿ 11 ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ಈ ಮಂಡಳಿಯು ನಾಡಿನ ಮಠಾಧೀಶರ ದುಂಡುಮೇಜಿನ ಪರಿಷತ್ತನ್ನು ಆಯೋಜಿಸಿದ್ದನ್ನು ಪತ್ರಿಕೆಗಳಲ್ಲಿ ನೀವು ಓದಿರಬಹುದು. ಅದರಲ್ಲಿ ನಮ್ಮ ಅನುಪಸ್ಥಿತಿಯನ್ನು ಮನಗಂಡ ಸಹೃದಯ ಓದುಗರು 'ತಮಗೆ ಆಹ್ವಾನವಿರಲಿಲ್ಲವೇ?' ಎಂದು ಕೇಳಿ ಪತ್ರ ಬರೆದಿದ್ದಾರೆ. 90 ರ ದಶಕದಲ್ಲಿ ನಾವು ಕೈಗೊಂಡಿದ್ದ ಪಾನನಿಷೇಧ ಆಂದೋಲನವನ್ನು ಹತ್ತಿರದಿಂದ ಬಲ್ಲ ಶಿವನಕೆರೆ ಬಸವಲಿಂಗಪ್ಪ ಸಖೇದಾಶ್ಚರ್ಯ ವ್ಯಕ್ತಪಡಿಸಿದ್ದಾರೆ. ಆಗಿನ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರು ನಮ್ಮನ್ನು ಸಿರಿಗೆರೆಯಲ್ಲಿ ಕಾಣಲು ಬಯಸಿದ್ದರು. ಒಂದು ಕೈಯಲ್ಲಿ ತೊಟ್ಟಿಲು ತೂಗಿ ಮತ್ತೊಂದು ಕೈಯಲ್ಲಿ ಮಗುವಿನ ಮೈ ಚಿವುಟುವ ಸರಕಾರದ ಈ ದ್ವಿಮುಖನೀತಿಯನ್ನು ವಿರೋಧಿಸಿ ಮೊದಲು ನೀವು ರಾಜೀನಾಮೆ ಕೊಟ್ಟು ಬನ್ನಿ ಎಂದು ಅವರಿಗೆ ನಿಷ್ಠುರವಾಗಿ ಹೇಳಿ ಕಳುಹಿಸಿದ್ದು ಈಗಿನ ಅಧ್ಯಕ್ಷರಾದ ಸಚ್ಚಿದಾನಂದ ಹೆಗಡೆಯವರಿಗೆ ತಿಳಿದಿರಬೇಕೆಂದು ತೋರುತ್ತದೆ. ಆದರೂ ಸಭೆಯಲ್ಲಿ ಭಾಗವಹಿಸಿದ್ದ ಅನೇಕರು ಎರಡು ದಶಕಗಳ ಹಿಂದೆ ಪಾನನಿಷೇಧ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ನಮ್ಮನ್ನು, ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗಡೆಯವರನ್ನು

ಮತ್ತು ಮಹಂತ ಜೋಳಿಗೆಯ ಇಳಕಲ್ ಸ್ವಾಮಿಗಳನ್ನೂ ನೆನೆಸಿಕೊಂಡರೆಂದು ಇತ್ತೀಚೆಗೆ ಸುತ್ತೂರುಶ್ರೀಗಳವರಿಂದ ತಿಳಿಯಿತು.

ಮಂಡಳಿಯ ಅಧ್ಯಕ್ಷರಾದ ಹೆಗಡೆಯವರು: "40 ವರ್ಷ ವಯೋಮಿತಿಯ ಜನರ ಪೈಕಿ ಶೇ. 60 ಜನರು ಮದ್ಯವ್ಯಸನಿಗಳಾಗಿದ್ದಾರೆ. ರಾಜ್ಯದಲ್ಲಿ 1.75 ಕೋಟಿ ಮದ್ಯವ್ಯಸನಿಗಳು ಇರುವಾಗ ಸರ್ಕಾರ ಒಂದು ವೇಳೆ ರಾಜ್ಯದಲ್ಲಿ ಸಂಪೂರ್ಣ ಮದ್ಯಪಾನ ನಿಷೇಧ ಜಾರಿಗೆ ತಂದು ಆದೇಶ ಹೊರಡಿಸಿದರೂ ಕೂಡ ಆದೇಶವನ್ನು ಜಾರಿಗೆ ತರುವುದು ಸುಲಭದ ಮಾತಲ್ಲ. ಇದಕ್ಕಾಗಿ ಪ್ರತಿಯೊಬ್ಬ ಮದ್ಯವ್ಯಸನಿಗೆ ಒಬ್ಬ ಪೋಲೀಸ್ ಪೇದೆಯನ್ನು ನಿಯೋಜಿಸಬೇಕಾಗುತ್ತದೆ" ಎಂಬ ಹತಾಶೆಯನ್ನು ವ್ಯಕ್ತಪಡಿಸಿದ್ದಾರೆ - ಆ ಪೋಲೀಸ್ ಪೇದೆ ಗುಂಡು ಹಾಕುವುದಿಲ್ಲವೆಂದು ಹೆಗಡೆಯವರು ಹೇಗೆ ಹೇಳಬಲ್ಲರು! ಸರಕಾರದ ಉಪ್ಪುಂಡ ಅವರಿಗೆ ಈ ಅಸಹಾಯಕತೆಯ ಮಾತುಗಳನ್ನಾಡದೆ ಬೇರೆ ವಿಧಿಯಿಲ್ಲ. ಸರಕಾರಕ್ಕೆ ಮದ್ಯಪಾನ ನಿಷೇಧವನ್ನು ಜಾರಿಗೆ ತರಬೇಕೆಂಬ ಇಚ್ಛಾಶಕ್ತಿಯೇ ಇಲ್ಲ. ಕಳ್ಳಭಟ್ಟಿಯ ನೆಪದಲ್ಲಿ ನಿಷೇಧ ಮಾಡುವ ಗೋಜಿಗೆ ಹೋಗದೆ ಅದು ತನಗೆ ಬರುವ ಅಬಕಾರಿ ಆದಾಯದಲ್ಲಿ ಹೆಚ್ಚಳವಾಗಲಿ ಎಂದು ಅಬಕಾರಿ ಇಲಾಖೆಗೆ ಇಂತಿಷ್ಟು ಅವಧಿಯಲ್ಲಿ ಇಂತಿಷ್ಟು ಪ್ರಮಾಣದ ಮದ್ಯ ಮಾರಾಟ ಮಾಡಬೇಕು ಎಂದು ಟಾರ್ಗೆಟ್ ನೀಡುತ್ತದೆ. ಟಾರ್ಗೆಟ್ ತಲುಪದ ಜಿಲ್ಲಾ ಘಟಕದ ಅಧಿಕಾರಿಗಳಿಗೆ ನೋಟೀಸ್ ನೀಡಲಾಗುತ್ತಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪಕ್ಷಾತೀತವಾಗಿ ಎಲ್ಲ ಸರಕಾರಗಳು ಮಾಡುತ್ತಾ ಬಂದಿರುವ ಘನಂದಾರಿ ಕೆಲಸವೆಂದರೆ ಇದೊಂದೇ.

"ಸಂಪೂರ್ಣ ಪಾನ ನಿಷೇಧಕ್ಕಿಂತಲೂ ಆರೋಗ್ಯ ಮತ್ತು ಸಮಾಜದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗೆಗೆ ಅರಿವು ಮೂಡಿಸುವುದು ಮುಖ್ಯ" ಎಂದು ಮಾನ್ಯ ಮುಖ್ಯಮಂತ್ರಿಗಳು ಅಂದಿನ ಸಭೆಯಲ್ಲಿ ಹೇಳಿದ್ದಾರೆ. ಅರಿವು ಇರಬೇಕಾದ್ದು ಕುಡುಕರಿಗೋ, ಕುಡಿಸುವವರಿಗೋ ಎಂಬುದನ್ನು ನಮ್ಮ 'ನಗೆಮೊಗದರಸ'ರಾದ ಸದಾನಂದ ಗೌಡರು ಚಿಂತಿಸುವುದೊಳಿತು. ಎರಡು ಶತಮಾನಗಳ ಹಿಂದೆ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದ 'ಮೈಸೂರು ಹುಲಿ' ಟಿಪ್ಪೂಸುಲ್ತಾನ್ ಕೈಗೊಂಡಿದ್ದ ಈ ಕೆಳಗಿನ ದೃಢನಿರ್ಧಾರ ಅವರಿಗೆ ಮಾರ್ಗದರ್ಶಕವಾಗಲಿ:

> **"ಹಣಕಾಸಿನ ಕಾರಣಗಳಿಂದಾಗಿ ನಾವು ಈ ವಿಚಾರವಾಗಿ ಅಂಜಬೇಕಾಗಿಲ್ಲ; ಹೆದರಬೇಕಾಗಿಲ್ಲ. ಸಂಪೂರ್ಣ ಪಾನನಿಷೇಧವನ್ನು ಜಾರಿಗೆ ತರಲು ನನ್ನ ಹೃದಯ ಹಾತೊರೆಯುತ್ತಿದೆ. ಇದು ಧರ್ಮದ ಪ್ರಶ್ನೆ ಮಾತ್ರವಲ್ಲ. ನಮ್ಮ ಜನರ ಆರ್ಥಿಕ ಸುಸ್ಥಿತಿ ಮತ್ತು ನೈತಿಕ ಉನ್ನತಿ ಮತ್ತು ಎಲ್ಲಕ್ಕೂ ಮಿಗಿಲಾಗಿ ನಮ್ಮ ಯುವಪೀಳಿಗೆಯ ಚಾರಿತ್ರ್ಯನಿರ್ಮಾಣ ಇವೆಲ್ಲವುಗಳ ಬಗ್ಗೆಯೂ ನಾವು ಅವಶ್ಯವಾಗಿ ಚಿಂತಿಸಬೇಕಾಗಿದೆ. ಪಾನನಿಷೇಧವನ್ನು ತಕ್ಷಣವೇ ಜಾರಿಗೆ ತರುವುದರಿಂದ ರಾಜ್ಯದ ಬೊಕ್ಕಸಕ್ಕೆ ನಷ್ಟವುಂಟಾಗುತ್ತದೆ ಎಂಬ ನಿಮ್ಮ ಕಳಕಳಿಯನ್ನು ನಾನು ಮೆಚ್ಚುತ್ತೇನೆ. ಆದರೆ ಹೀಗೆಯೇ ಬಿಟ್ಟರೆ ಮುಂದಿನ ಭವಿಷ್ಯ ಏನಾದೀತೆಂಬ ಬಗ್ಗೆ ನಾವು ಯೋಚಿಸಬೇಡವೇ? ನಮ್ಮ ಜನರ ಆರೋಗ್ಯ ಮತ್ತು ನೈತಿಕ ಉನ್ನತಿಗಿಂತ ನಮ್ಮ ರಾಜ್ಯದ ಬೊಕ್ಕಸಕ್ಕೆ ಬರುವ ಆದಾಯವೇ ಹೆಚ್ಚು ಮುಖ್ಯವಾಗಬೇಕೆ?" - (ಟಿಪ್ಪುವಿನ ರೆವಿನ್ಯೂ ದಾಖಲೆಗಳು 1787)**

ಧೂಮಪಾನ ಎಷ್ಟೇ ಕೆಟ್ಟದ್ದಾಗಿದ್ದರೂ ಮದ್ಯಪಾನ ಸಂಯಮ ಮಂಡಳಿ ಇರುವಂತೆ ಧೂಮಪಾನ ಸಂಯಮ ಮಂಡಳಿಯಂತೂ ಇಲ್ಲ. ಹೀಗಿರುವಾಗ ಮದ್ಯಪಾನ ಸಂಯಮ ಮಂಡಳಿಯ ಅಗತ್ಯವಾದರೂ ಏನಿದೆ? ಸರಕಾರ ಪಾನನಿಷೇಧವನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಈ 'ಮದ್ಯಪಾನ ಸಂಯಮ ಮಂಡಳಿ'ಯನ್ನೇ ರದ್ದುಮಾಡಿ ಕೆಲವಾರು ಕೋಟಿ ರೂ. ಗಳ ಉಳಿತಾಯದಿಂದ ತನ್ನ ಆರ್ಥಿಕ ಸಂಕಷ್ಟವನ್ನು ನಿವಾರಣೆ ಮಾಡಿಕೊಳ್ಳಬಾರದೇಕೆ?

19.1.2012

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑